ದಿನಾಂಕಃ 25.02.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.

ಮುಖ್ಯವಿಚಾರಣೆಃ ಶ್ರೀ.ಬಿ ವೈ ಆರ್ ವಕೀಲರಿಂದ ಅರ್ಜಿದಾರರ ಪರವಾಗಿ.

ನನ್ನ ಮುಖ್ಯವಿಚಾರಣೆಯಾಗಿ ಹಾಜರುಪಡಿಸಿರುವ ಪ್ರಮಾಣಪತ್ರದಲ್ಲಿ ಬರೆಯಲಾಗಿರುವ ಅಂಶಗಳು ನನಗೆ ತಿಳಿದಿದ್ದು ಸಂತ್ಯಾಂಶಗಳಿಂದ ಕೂಡಿರುತ್ತದೆ.

| | |
|---|---|
| ನಿಪಿಃ1 | ಪ್ರಥಮ ವರ್ತಮಾನ ವರದಿಯ ದೃಡೀಕೃತ ನಕಲು |
| ನಿಪಿಃ2 | ಪಿರ್ಯಾದು ದೃಡೀಕೃತ ನಕಲು |
| ನಿಪಿಃ3 | ಸ್ಥಳ ಪಂಚನಾಮೆಯ ದೃಡೀಕೃತ ನಕಲು |
| ನಿಪಿಃ4 | ಸ್ಥಳ ಕಚ್ಚಾನಕ್ಷೆಯ ದೃಡೀಕೃತ ನಕಲು |
| ನಿಪಿಃ5 | ಐಎಂವಿ ವರದಿಯ ದೃಡೀಕೃತ ನಕಲು |
| ನಿಪಿಃ6 | ಗಾಯದ ಪ್ರಮಾಣಪತ್ರದ ದೃಡೀಕೃತ ನಕಲು |
| ನಿಪಿಃ7 | ದೋಷಾರೋಪಣ ಪಟ್ಟಿಯ ದೃಡೀಕೃತ ನಕಲು |
| ನಿಪಿಃ8 | ಆಸ್ಪತ್ರೆ ಬಿಡುಗಡೆ ಪತ್ರ |
| ನಿಪಿಃ9 | ಒಟ್ಟು 5 ಮೆಡಿಕಲ್ ಬಿಲ್ಲುಗಳು |
| ನಿಪಿಃ10 | ಐದು ಔಷಧಿ ಚೀಟಿಗಳು |
| ನಿಪಿಃ11 | ಆದಾರ್ ಕಾರ್ಡನ ನೋಟರೀಕೃತ ಪ್ರತಿ (ಮೂಲ ದಾಖಲೆಯೊಂದಿಗೆ ತಾಳೆ ಮಾಡಿ ನೋಡಿ ಹಿಂದಿರುಗಿಸಲಾಯಿತು) |

ಪಾಟೀಸವಾಲುಃ ಶ್ರೀ.ಜಿ ಎಸ್ ವಕೀಲರಿಂದ ಎದುರುದಾರರ ಪರವಾಗಿ.

ಅಪಘಾತವು ರಸ್ತೆಯಮಧ್ಯೆದಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ತಾನು ಪುಟ್‌ಪಾತ್ ಮೇಲೆ ನಿಂತಿದ್ದಾಗ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಆಟೋರಿಕ್ಷಾವು ನನಗೆ ಡಿಕ್ಕಿಹೊಡೆದಿದ್ದರಿಂದ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ಪೋಲೀಸ್ ದಾಖಲೆಗಳಂತೆ ಅಪಘಾತವು ರಸ್ತೆ ಮಧ್ಯೆ ಆಗಿರುತ್ತದೆ ಎಂದು ತೋರಿಸಲಾಗಿದ್ದು ಆದರೆ ಪುಟ್ಪಾತ್ ಮೇಲೆ ಅಪಘಾತವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರು ನಂಬರು.ಕೆಎ-04-ಎಮ್ ಟಿ -7689 ವಾಹನವು ನನಗೆ ಅಪಘಾತಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ

ಅಪಘಾತ ಪಡಿಸಿದಂತಹ ಆಟೋರಿಕ್ಷಾ ಗೆ ವಿಮೆ ಇಲ್ಲದೇ ಇದ್ದುದರಿಂದ ಕಾರು ಚಾಲಕನ ವಿರುದ್ದ ಸುಳ್ಳು ದೂರನ್ನು ದಾಖಲು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಚಿನ್ಮಯ ಆಸ್ಪತ್ರೆಗೆ ಯಾರು ಸೇರಿಸಿರುತ್ತಾರೆ ಎಂದರೆ ನನ್ನ ಜೊತೆ ಇದ್ದ ನಮ್ಮ ಸಂಬಂದಿಕರು ಸೇರಿಸಿರುತ್ತಾರೆ. ಚಿನ್ಮಯ ಆಸ್ಪತ್ರೆಯ ಎಮ್ ಎಲ್ ಸಿ ದಾಖಲೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಮತ್ತು ಕಾರಿನ ಮಾಲೀಕರು ಪೋಲೀಸಿನವರೊಂದಿಗೆ ಶಾಮೀಲಾಗಿ ಸುಳ್ಳು ಪ್ರಕರಣ ದಾಖಲು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.

2. ನಾನು ಬೇರೆ ಯಾವುದೇ ಕೆಲಸ ಮಾಡುತ್ತಿಲ್ಲ ಮನೆಯಲ್ಲಿ ಗೃಹಿಣಿಯಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಅಂಗಡಿ ವ್ಯವಹಾರ ಮಾಡುತ್ತಿರುವುದಿಲ್ಲ ಹಾಗೂ ತಿಂಗಳಿಗೆ ರೂ.15,000-00 ಸಂಪಾದನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆ ಮತ್ತು ಔಷಧಿಗಾಗಿ ರೂ.1,00,000-00 ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೇವಲ ರೂ.23,000-00 ಆಸ್ಪತ್ರೆ ಮತ್ತು ಔಷಧಿಗಾಗಿ ಖರ್ಚು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೆಡಿಕಲ್ ಬಿಲ್ಲುಗಳನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಶಸ್ತ್ರಚಿಕಿತ್ಸೆ ಆಗಿರುವುದಿಲ್ಲ ಮತ್ತು ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ದೊಡ್ಡ ಗಾಯಗಳು ಆಗಿರುವುದಿಲ್ಲ ಸಣ್ಣಪುಟ್ಟ ಗಾಯಗಳು ಆಗಿದ್ದು ಈಗ ಸಂಪೂರ್ಣವಾಗಿ ಆರೋಗ್ಯವಾಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯದ ಪ್ರಮಾಣಪತ್ರದಲ್ಲಿ ನನಗೆ ಯಾವುದೇ ತೊಂದರೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನನಗೆ 66 ವರ್ಷ ವಯಸ್ಸು ಆಗಿದ್ದು 65 ಎಂದು ಸುಳ್ಳು ಹೇಳಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವಂತಹ ನಿಪಿಃ8 ರಂತಿರುವ ಆಸ್ಪತ್ರೆ ಬಿಡುಗಡೆ ಪತ್ರವು ಈ ಪ್ರಕರಣದಲ್ಲಿ ಹೇಳಲಾದ ಅಪಘಾತದಲ್ಲಿ ಗಾಯಗೊಂಡು ಚಿಕಿತ್ಸೆ ಪಡೆದುಕೊಂಡಿರುವುದಕ್ಕೆ ಸಂಬಂದಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಅದನ್ನು

ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಮೆಡಿಕಲ್ ಬಿಲ್ಲುಗಳನ್ನು ಇರುವಂತಹ ಕ್ರವು ಸಂಖ್ಯೆ .1 ಬಿಲ್ಲು ಆಸ್ಪತ್ರೆಯ ಪೈನಲ್ ಬಿಲ್ಲು ಆಗಿರುವುದಿಲ್ಲ ಅದು ಕೇವಲ consolidated ಬಿಲ್ಲು ಆಗಿರುತ್ತದೆ ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ.1 ರಂತಿರುವ ಆಸ್ಪತ್ರೆ ಬಿಲ್ಲನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇದೆ.

15 ನೇ ಅಪರ ನ್ಯಾಯಾಧೀಶರು

ಮತ್ತು ಎಂಎಸಿಟಿ